ಮಾಧವಿಲತಾಗೂ ಸ್ನೇಹ ಬೆಳೆದಿತ್ತು. ಮಾಧವಿದಿ ಕೈ ಅಡುಗೆ ಬಹಳ ರುಚಿ, ರಿಯಾ ಅಮ್ಮನ ಕೈ ರುಚಿಯಿದ್ದಂತೆ. ಅವರು ಆಗಾಗ್ಗೆ ಅದೂ ಇದೂ ಅಡುಗೆ ಮಾಡಿ ಅವಳಿಗೆ ಕೊಡುತ್ತಿದ್ದರು. ರಿಯಾಗೆ ಒಂಥರಾ ನಾಚಿಕೆ, ತಾನೂ ಏನಾದ್ರೂ ಅಡುಗೆ ಮಾಡಿ ಅವರಿಗೆ ಕೊಡಬೇಕು ಅಂತ ಆಸೆ. ಆದರೆ ಮಾಧವಿದಿ ಮೊದಲೇ ಬಾಲವಿಧವೆ, ಅದಲ್ಲದೆ ಸುಮಾರು ವರ್ಷ ಕಾಶಿಯ ರಾಧಾಮಾಧವ ಮಂದಿರದಲ್ಲಿದ್ದುದರಿಂದ ಅವರು ಬೇರೆಯವರ ಕೈ ಅಡುಗೆ ತಿನ್ನುವುದಿಲ್ಲ, ಅವರದೇನಿದ್ದರೂ ಸ್ವಯಂಪಾಕ.

ಚೈತಾಲಿ ಹುಟ್ಟಿದ ಮೂರು ವರ್ಷಕ್ಕೆ ಜಯಾ ಮಡಿಲಿಗೆ ರೋಣಿತ್ ಬಂದ. ಜಯಾ ಆಫೀಸಲ್ಲಿ; ಮಾಧವಿಲತಾ ಚೈತಾಲಿ ರೋಣಿತ್ ಜೊತೆಯಲಿ. ರಿಯಾ ನೋಡುನೋಡುತ್ತಿದ್ದಂತಯೇ ಚೈತಾಲಿ ರೋಣಿತ್ ದೊಡ್ಡವರಾಗುತ್ತಿದ್ದರು, ಮಾಧವಿದಿಯ ಆರೈಕೆ, ಉಪಚಾರ ಮತ್ತು ಪಾಲನೆಯೊಂದಿಗೆ. ಚೈತಾಲಿ ಈಗ ಮೂರನೇ ಕ್ಲಾಸಲ್ಲಿ, ರೋಣಿತ್ ಕೆಜಿಯಲ್ಲಿ. ಒಪ್ಪೊತ್ತಿನ ಕೆಲಸದವಳು ಬೆಳಿಗ್ಗೆ ಮಕ್ಕಳನ್ನು ಸ್ಕೂಲಿಗೆ ಕರೆದುಕೊಂಡು ಹೋಗಿ ಬಿಡ್ತಾಳೆ ಮತ್ತು ಮಧ್ಯಾಹ್ನ ಕರೆದುಕೊಂಡು ಬರುತ್ತಾಳೆ. ಮಕ್ಕಳೆರಡು ಸೋದರತ್ತೆಯನ್ನ ಅತ್ತಮ್ಮ ಅಂತ ಕರೀತಾರೆ. ಅವರಿಗೆ ಮಾಧವಿದಿನೆ ತಾಯಿಯಂತೆ: ಅವರಿಗೂ ಅವರು ಸ್ವಂತ ಮಕ್ಕಳಿದ್ದಂತೆ. ಮಕ್ಕಳಿಬ್ಬರೂ ಅತ್ತಮ್ಮನನ್ನು ಬಹಳ ಹಚ್ಚಿಕೊಂಡರು. ಜಯಾ ಆಫೀಸಿಂದ ಬಂದ ಮೇಲೂ ಅಮ್ಮನ ಹತ್ತಿರ ಹೋಗದೆ ಮಕ್ಕಳು ಅತ್ತಮ್ಮನ ಹತ್ತಿರಾನೇ ಇರ್ತಾಯಿದ್ರು. ಅತ್ತಮ್ಮ ಇಲ್ಲದೆ ಅವರಿಗೆ ಏನೂ ನಡೆಯದು. ಅತ್ತಮ್ಮನ ಹತ್ತಿರ ಹಟ, ಆಟ, ಅತ್ತಮ್ಮನೇ ಎಲ್ಲ.

ಚೈತಾಲಿ ರೋಣಿತ್ ಎಷ್ಟು ದೊಡ್ಡವರಾಗುತ್ತಾ ಹೋದರೋ ಅವರ ಸಂಸಾರದಲ್ಲಿ ಮಾಧವಿಲತಾರ ಪ್ರಯೋಜನವೂ ಅಷ್ಟು ಕಡಿಮೆಯಾಗುತ್ತಾ ಹೋಯ್ತು. ಅಷ್ಟರೊಳಗೆ ಜಯಾ ತಂದೆ ತೀರಿಕೊಂಡರು. ಜಯಾಳ ತಂಗಿ ಮದುವೆಯಾಗಿ ದೂರದ ಸಿಲಿಗುರಿಗೆ ಹೋದಳು. ಅವರಮ್ಮನಿಗೆ ಒಬ್ಬಳೇ ಇರೋಕೆ ಇಷ್ಟ ಆಗ್ತಾಯಿಲ್ಲ. ಜಯಾಗೂ ಮಾ ತನ್ನ ಜೊತೆ ಬಂದಿರಲಿ ಅಂತ ಆಸೆ. ಈ ಸಲ ಸುದೀಪ್ತನಿಗೆ ಅಕ್ಕನನ್ನು ಕಾಶಿಗೆ ವಾಪಸು ಹೋಗು ಅಂತ ಹೇಳೋಕೆ ವಿಷಾದವೆನಿಸಿತು.

ಚೈತಾಲಿ ರೋಣಿತರಿಗೆ ಅತ್ತಮ್ಮ ಅಂದ್ರೆ ಪ್ರಾಣ, ಅಮ್ಮನಿಗಿಂತಲೂ ಹೆಚ್ಚು. ಆದರೆ ಜಯಾಗೆ ಇದು ತನ್ನ ತಾಯ್ತನಕ್ಕಾದ ಅಪಮಾನ. ಈಗ ಅವಳು ಜಬರ್ದಸ್ತಿನಿಂದ ಚೈತಾಲಿ ರೋಣಿತ್‌ಗೆಐ ಅಮ್ಮನಾಗಲು ಪ್ರಯತ್ನಿಸುತ್ತಿದ್ದಳು. ಅಲ್ಲದೆ, ಈಗ ಮಾಧವಿಲತಾರಿಂದ ಪ್ರಯೋಜನವೇನು? ಹೇಗೋ ಅಮ್ಮ ಬರುತ್ತಾರೆ, ಮಕ್ಕಳನ್ನ ನೋಡಿಕೊಳ್ಳುತ್ತಾರೆ.

ಸುದೀಪ್ತ ಬಹಳ ಮೃದುವಾಗಿ ಅಕ್ಕನಿಗೆ ಕಾಶಿಗೆ ಹಿಂದಿರುಗಲು ಹೇಳಿದ. ಈ ಸಲ, ಇದೇ ಮೊದಲ ಸಲ, ಮಾಧವಿಲತಾ ಕಾಶಿಗೆ ಹೋಗಲು ನಿರಾಕರಿಸಿದರು. ಅವರಲ್ಲಿ ಮಕ್ಕಳ ಮೇಲೆ ಮಾಯಾಮೋಹ, ವಾತ್ಸಲ್ಯದ ಬಂಧನ ಬೆಳೆದು ಬಿಟ್ಟಿತ್ತು. ಈ ಮಾತೃತ್ವ ಅವರ ಇಡೀ ಜೀವಮಾನದ ಸಂಪಾದನೆಯಾಗಿತ್ತು. ಮಕ್ಕಳನ್ನು ಬಿಟ್ಟು ಅವರು ಇರಬಲ್ಲರೇ? ಅಷ್ಟು ದೂರದ ಕಾಶಿಯಲ್ಲಿ? 'ಮನೆಯ ಒಂದು ಕೋಣೆ, ಒಂದು ಮೂಲೆಯ ಜಾಗ, ಎರಡು ತುತ್ತು ಅನ್ನ ಕೊಡು ಸಾಕು' ಅಂತ ತಮ್ಮನನ್ನು ಬೇಡಿಕೊಂಡರು. ಅಷ್ಟಕ್ಕಾಗಿ ಅವನ ಸಂಸಾರಕ್ಕೆ ಜೀವನವನ್ನೆಲ್ಲ ತೇಯೋಕೆ ಸಿದ್ಧರಿದ್ದರು, ಆದರೆ ಮಕ್ಕಳನ್ನು ಬಿಟ್ಟು ಇರಲಾರರು.

* * *

ಮಾಧವಿಲತಾರನ್ನ ಕರೆದುಕೊಂಡು ರಿಕ್ಷಾ ರಸ್ತೆಯ ತಿರುವಿನಲ್ಲಿ ಮರೆಯಾದದ್ದನ್ನು ನೋಡಿದಳು ರಿಯಾ. ಮತ್ತೆಂದಾದರೂ ಸುದೀಪ್ತನ ಸಂಸಾರಕ್ಕೆ ಮಾಧವಿಲತಾರ ಪ್ರಯೋಜನ ಬೇಕಾಗಬಹುದೇ? ಆ ದಿನ ಆಕೆ ಮತ್ತೆ ಬರುತ್ತಾರೆಯೇ? ರಿಕ್ಷಾ ಹತ್ತುವ ಮೊದಲು ಕತ್ತೆತ್ತಿ ರಿಯಾಳನ್ನು ನೋಡಿದ ಮಾಧವಿಲತಾ ದೃಷ್ಟಿ ಬೇರೆಡೆ ಹೊರಳಿಸಿದರು. ಬಹುಶಃ ಅವರು ತಮ್ಮ ಕಣ್ಣೀರನ್ನು ಅಡಗಿಸುತ್ತಿರಬಹುದು. ಪಕ್ಕದಲ್ಲಿ ಸುದೀಪ್ತ. ಚೈತಾಲಿ ರೋಣಿತರಿಗೆ ಏನೂ ಅರ್ಥ ಆಗ್ತಾಯಿಲ್ಲ ಅನಿಸುತ್ತೆ. ಅವರು ತಮ್ಮ ಪ್ರೀತಿಯ ಅತ್ತಮ್ಮ ಹೋಗುವುದನ್ನ ನೋಡುತ್ತಾ ನಿಂತಿದ್ದರು. ರಿಯಾ ಯೋಚಿಸುತ್ತಾಯಿದ್ದಳು, ಅವರು ಈ ಜಗತ್ತನ್ನ ಅರ್ಥಮಾಡಿಕೊಳ್ಳುವಷ್ಟು ದೊಡ್ಡವರಾಗಿದ್ದಿದ್ದರೆ...

ಆಕಾಶ ಮುರಿದು ಬೀಳುವಂತೆ ಮಳೆ ಶುರುವಾಯಿತು. ದೊಡ್ಡ ದೊಡ್ಡ ಮಳೆ ಹನಿಗಳು ಬಾಲ್ಕನಿಯ ಗ್ರಿಲ್ ತೂರಿಕೊಂಡು ಬಂದು ಕಣ್ಣನ್ನು ತೇವಗೊಳಿಸಿದಂತೆ ರಿಯಾಳಿಗೆ ಭಾಸವಾಯಿತು. ●